**<u>ಸಾಕ್ಷಿಯನ್ನು ಇಂದು ದಿ.10.06.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**
**<u>ಪಾಟೀ ಸವಾಲುಃ ಶ್ರೀ.ಎಸ್.ಎಸ್.ಜಿ., ವಿಶೇಷ ಸರಕಾರಿ ವಕೀಲರಿಂದ 1 ಮತ್ತು 2 ನೇ ಎದುರುದಾರರ ಪರವಾಗಿಃ</u>**

1) ನನ್ನ ಜಮೀನು ಸರ್ವೆ ನಂ.28/1, 58/2 ಇದ್ದು, ಅದು ಒಟ್ಟು 10 ಎಕರೆ 30 ಗುಂಟೆ ಜಮೀನು ಇದ್ದು, ಅದರಲ್ಲಿ 35 ಗುಂಟೆ ಜಮೀನು ಸ್ವಾಧೀನಗೊಂಡಿರುತ್ತದೆ.

2) **ನಾನು ಈ ಪ್ರಕರಣವಲ್ಲದೇ ಬೇರೆ ಯಾವುದೇ ನ್ಯಾಯಾಲಯದಲ್ಲಿ ನನ್ನ ಸ್ವಾಧೀನಗೊಂಡ ಜಮೀನಿಗೆ ಸಂಬಂದಿಸಿದಂತೆ ಹೆಚ್ಚುವರಿ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುವದಿಲ್ಲ.**

3) ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಮತ್ತು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿ. ನೋಟಿಸ ಜಾರಿ ಮಾಡಿದ ನಂತರ ಅಧಿಕಾರಿಗಳು ಬಂದು ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ **ಕುಮಟಗಿ** ಗ್ರಾಮಕ್ಕೆ ನಿಗದಿಮಾಡಿದ ಬೆಲೆಯನ್ನು ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

4) ಹೆಚ್ಚಿನ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ ದಿನಾಂಕ ನೆನಪಿಲ್ಲ. ಅರ್ಜಿಯನ್ನು ನಾನು ನಿಗದಿತ ಕಾಲಮಿತಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

5) ನನ್ನ ಜಮೀನು ಸಂಪೂರ್ಣ ಒಣಬೇಸಾಯದ ಜಮೀನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನೀರಾವರಿ ಜಮೀನು ಇರುತ್ತದ ಎಂದು ನುಡಿದಿರುತ್ತಾರೆ.

6) ಎರೆ ಜಮೀನು ಹಾಗೂ ಮರಡಿ ಜಮೀನು ಕಿಮ್ಮತ್ತು ಬೇರೆ ಬೇರೆ ಇರುತ್ತವೆ ಎಂದರೆ ಸರಿ. ಭೂಮಿಯ ಫಲವತ್ತತೆ ಒಂದು ಜಮೀನದಿಂದ ಇನ್ನೊಂದು ಜಮೀನಕ್ಕೆ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಪ್ಯಾರಾ ನಂ.4 ರಲ್ಲಿ ಹೇಳಿರುವ ಸಂಗತಿಗಳನ್ನು ಸಾಬೀತುಪಡಿಸಲು ಎ.ಪಿ.ಎಮ್.ಸಿಯಿಂದಾಗಲಿ ಅಥವಾ

ಬೇರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.

7) ನಿ.ಪಿ.3 ರಿಂದ 10 ಕಗ್ನೋಡ, ಕುಮಟಗಿ ಹಾಗೂ ಹಡಗಲಿ ಗ್ರಾಮಗಳ ಖರೀದಿ ಪತ್ರಗಳು ಮತ್ತು ಖರಿದಿ ಕರಾರು ಪತ್ರಗಳು ಇದ್ದು, ಸದರಿ ಖರೀದಿ ಪತ್ರಗಳು ಯಾರಿಗೆ ಸಂಬಂಧಪಟ್ಟಿದ್ದು, ಯಾವ ಉದ್ದೇಶಕ್ಕೆ ಖರೀದಿ ಆಗಿರುತ್ತದೆ, ಎಷ್ಟು ಬೆಲೆಗೆ ಖರೀದಿಸಿರುತ್ತಾರೆ ಮತ್ತು ಸರ್ವೆ ನಂಬರ ಹೇಳಲು ಬರುವುದಿಲ್ಲ. ಕಗ್ನೋಡ ಗ್ರಾಮದ ಖರೀದಿ ಪತ್ರದ ಜಮೀನುಗಳಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 12 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 3 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ಹಡಲಗಿ ಗ್ರಾಮದ ಖರೀದಿ ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 20 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 7-8 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ.

8) ನಮ್ಮ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಮೂರು ವರ್ಷ ಮುಂಚೆ ನಮ್ಮೂರಿನಲ್ಲಿ ಸುಮಾರು 80-100 ಖರೀದಿ ಪತ್ರಗಳು ಆಗಿರುತ್ತವೆ ಎನ್ನುವುದು ನಿಜ. ನಮ್ಮೂರಿಗೆ ಸಂಬಂಧಿಸಿದಂತೆ ನಿ.ಪಿ.5 ರಿಂದ 7 ಮತ್ತು 10 ಖರೀದಿ ಪತ್ರಗಳನ್ನು ಹಾಜರುಪಡಿಸಿರುತ್ತೇನೆ ಎನ್ನುವುದು ನಿಜ. ಸದರಿ ಸ್ವತ್ತುಗಳನ್ನು ಪವನ ವಿದ್ಯುತ್ ಯೋಜನೆಗಾಗಿ ಖರೀದಿಸಿರುತ್ತಾರೆ ಎನ್ನುವುದು ನಿಜ. ಕೂಡಗಿ ವಿದ್ಯುತ್ ಸ್ಥಾವರ ಮತ್ತು ವಿಮಾನ ನಿಲ್ದಾಣಕ್ಕಾಗಿ ಜಮೀನುಗಳನ್ನು ಹೆಚ್ಚಿನ ಬೆಲೆಗೆ ಖರೀದಿಸಿರುತ್ತಾರೆ ಎನ್ನುವುದು ನಿಜ. ನಮ್ಮ ಜಮೀನದಲ್ಲಿ ಕಾಲುವೆ ಹಾದು ಹೋಗಿದ್ದರಿಂದ ಎರಡು ಭಾಗವಾಗಿ ಉಳುಮೆ ಮಾಡಲು ತೊಂದರೆಯಾಗಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ನಿಜ.

9) ನಾನು ಒಂದು ಎಕರೆಗೆ 90 ಲಕ್ಷ ಪರಿಹಾರ ಕೇಳಿದ್ದು, ಅದಕ್ಕೆ ಸೂಕ್ತ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸರ್ಕಾರ ಸೂಕ್ತವಾದ ಬೆಲೆ ಕೊಟ್ಟಿದ್ದರು ಸಹ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ.SSS., ವಕೀಲರಿಂದ 3 ನೇ ಎದುರುದಾರ ಪರವಾಗಿ:**

10) ನಮ್ಮ ಜಮೀನಿನ ಸುತ್ತಮುತ್ತ ಇರುವಂತಹ ಜಮೀನುಗಳು ಮಾರಾಟವಾದ ಬಗ್ಗೆ ಖರೀದಿ ಪತ್ರಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನಿ.ಪಿ.3 ರಿಂದ 10 ರಲ್ಲಿ ನಮೂದಿಸಲಾದ ಸ್ವತ್ತುಗಳನ್ನು ಪವನ ವಿದ್ಯುತ್ ಉತ್ಪಾದನಾ ಯಂತ್ರ ಅಳವಡಿಸಲು ಖರೀದಿಸಿರುತ್ತಾರೆ ಎನ್ನುವುದು ನಿಜ. ಕೈಗಾರಿಕಾ ಉದ್ದೇಶಕ್ಕಾಗಿ ಸದರಿ ಜಮೀನುಗಳನ್ನು ಖರೀದಿಸಲಾಗಿದೆ ಎನ್ನುವುದು ನಿಜ. ಸಾಮಾನ್ಯವಾಗಿ ವಾಣಿಜ್ಯ ಉದ್ದೇಶಕ್ಕಾಗಿ ಖರೀದಿಸಿದ ಜಮೀನುಗಳು ಹೆಚ್ಚು ಬೆಲೆಗೆ ಮಾರಾಟವಾಗುತ್ತವೆ ಎನ್ನುವುದು ನಿಜ. ನಮ್ಮ ಜಮೀನು ಒಣಬೇಸಾಯದ ಜಮೀನು ಎನ್ನುವುದು ನಿಜ.

11) ನಮ್ಮೂರಿನಲ್ಲಿ ಮಾರಾಟವಾದಂತಹ ಖರೀದಿ ಪತ್ರಗಳನ್ನು ಪರಿಗಣಿಸಿ ನಮ್ಮ ಜಮೀನಿಗೂ ಸೂಕ್ತ ಮಾರುಕಟ್ಟೆ ಬೆಲೆ ನಿರ್ಧರಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. 1 ನೇ ಎದುರುದಾರರು ಯಾವ ಆಧಾರದ ಮೇಲೆ ನಮ್ಮ ಜಮೀನಿಗೆ ಮಾರುಕಟ್ಟೆ ಬೆಲೆ ನಿರ್ಧರಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

12) ಕುಮಟಗಿ ಗ್ರಾಮದ ಸುಮಾರು 81 ಖರೀದಿ ಪತ್ರಗಳನ್ನು ಪರಿಶೀಲನೆ ಮಾಡಿ ನಮ್ಮ ಜಮೀನಿಗೆ ಸೂಕ್ತ ಮಾರುಕಟ್ಟೆ ಬೆಲೆಯನ್ನು ನಿರ್ಧರಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸ.ನಂ.31 ನಮ್ಮ ಜಮೀನಿನ ಪಕ್ಕದಲ್ಲಿಯೇ ಇರುತ್ತದೆ. ಸ.ನಂ.31 ಕ್ಕೆ ಉಪನೋಂದಣಾಧಿಕಾರಿಗಳ ಕಾರ್ಯಾಲಯದವರು ಒಂದು ಎಕರೆ ರೂ.68,293/- ಮಾರುಕಟ್ಟೆ ಬೆಲೆಯನ್ನು ನಿರ್ಧರಿಸಿರುತ್ತಾರೆ ಎನ್ನುವುದು ನಿಜ.

13) ವಿಜಯಪುರದಿಂದ ಸಿಂದಗಿಗೆ ಹೋಗಬೇಕಾದರೆ ನಮ್ಮ ಜಮೀನು ರಾಜ್ಯ ಹೆದ್ದಾರಿಯ ಎಡಗಡೆ ಇರುತ್ತದೆ. ನಮ್ಮ ಜಮೀನಿನ ಎಡಭಾಗಕ್ಕೆ ಆಹೇರಿ ಗ್ರಾಮ ಬರುತ್ತದೆ ಎನ್ನುವುದು ನಿಜ. ಆಹೇರಿ ಗ್ರಾಮದ ಖರೀದಿ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ ಎನ್ನುವುದು ನಿಜ.

14) ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸಂಬಂಧಿಸಿದಂತೆ

1 ನೇ ಎದುರುದಾರರು ನಿಗದಿ ಮಾಡಿದ ಪರಿಹಾರ ಕಾನೂನು ಪ್ರಕಾರವಾಗಿ ಸರಿಯಾಗಿದೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.